**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ**

**ಪ್ರಶ್ನೆ:** ದಿನಾಂಕ: 11.08.2025ರ ಹೊಸದಿಗಂತ ದಿನ ಪತ್ರಿಕೆಯಲ್ಲಿ ಪ್ರಕಟಿಸಿರುವಂತೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧ ಸುಳ್ಳು ಸುದ್ದಿ ಹರಡುತ್ತಿರುವುದು ವಿಷಾದನೀಯ ಇದು ತಪ್ಪು ಮಾಹಿತಿಯಿಂದ ಕೂಡಿದ್ದು, ಈ ವಿಷಯವನ್ನು ಗೃಹ ಇಲಾಖೆ ಗಂಭೀರವಾಗಿ ಪರಿಗಣಿಸಬೇಕಿದೆ.

ಸಂಘ ಮತ್ತು ಸ್ವಾತಂತ್ರ್ಯ ಹೋರಾಟಗಾರರ ನಡುವೆ ಇದ್ದ ಸಮನ್ವಯಕ್ಕೆ ಹಲವು ಸಾಕ್ಷಿಗಳು ಇವೆ. ಹೆಗಡೆವಾರ್ ಅವರು ಸಂಘವನ್ನು ಸ್ಥಾಪಿಸಿದ ನಂತರ ಕೇವಲ 15 ವರ್ಷಗಳಲ್ಲಿ ಅದನ್ನ ಬಲಿಷ್ಠ ಸಂಘಟನೆಯನ್ನಾಗಿ ಬೆಳೆಸಿದರು. ಸಮಾಜ ಸುಧಾರಣೆ ಮತ್ತು ಸೇವೆಯ ಮೂಲಕ ಸಂಘಟನೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೊಸ ಆಯಾಮ ನೀಡಿದೆ 1928ರಲ್ಲಿ ಭಾರತಕ್ಕೆ ಬಂದ ಸೈಮನ್ ಕಮಿಷನ್ ವಿರುದ್ಧವಾಗಿ ನಾಗ್ಪುರದಲ್ಲಾದ ಹರತಾಳ ಪ್ರದರ್ಶನಗಳಲ್ಲಿ ಸಂಘದ ಸ್ವಯಂ ಸೇವಕರು ಮುಂದಾಳಾಗಿದ್ದರು. ಭಗತ್ ಸಿಂಗ್, ರಾಜ್‌ಗುರು, ಮದನ ಮೋಹನ ಮಾಲವೀಯ ಕೂಡ ಸಂಘದ ಕಾರ್ಯಕರ್ತರ ಜನತೆಗೆ ನಂಟನ್ನು ಹೊಂದಿದ್ದರು, ಪ್ರಥಮ ಮಹಾಯುದ್ಧದ ವೇಳೆ ಸಂಪೂರ್ಣ ಭಾರತದ ಸೈನಿಕರ ಛಾವಣಿಗಳಲ್ಲಿ ರಾಸ್ ಬಿಹಾರಿ ಬೋಸ್, ಹಾಗೂ ಶಚೀಂದ್ರ ಸನ್ಯಾಲ್ ಅವರ ನೇತೃತ್ವದಲ್ಲಿ 1915ರಲ್ಲಿ ನಡೆದ ಕ್ರಾಂತಿಯಲ್ಲಿ ಮಧ್ಯ ಭಾರತದ ಪ್ರಮುಖರಾಗಿ ಹೆಗಡೆವಾರ್ ಅವರು ಕಾರ್ಯ ನಿರ್ವಹಿಸಿದ್ದರು. ಕಾಶ್ಮೀರವನ್ನ ಭಾರತದೊಂದಿಗೆ ವಿಲೀನಗೊಲಿಸುವಲ್ಲಿ ಕೂಡ ಸಂಘದ ಪಾತ್ರವಿದ್ದು ಎಂ.ಎಸ್.ಗೋಲ್ವಕ್ಕರ್ (ಗುರೂಜಿ) ಅವರು ರಾಜ ಹರಿಸಿಂಗ್ ಅವರನ್ನು ಮನವೊಲಿಸಿದ್ದರು. ಹೈದರಬಾದನ್ನು ಭಾರತದೊಂದಿಗೆ ಸೇರಿಸಿಕೊಳ್ಳಲು ಸಂಘದ ಸ್ಥಾನೀಯ ಕಾರ್ಯಕರ್ತರ ಪಾತ್ರ ಬಹುಮುಖ್ಯವಾಗಿದೆ. ಗೋವಾ ಮತ್ತು ದಾದರ್‌ನಗರ ಹವೇಲಿಯನ್ನು ಪೋರ್ಚುಗೀಸರಿಂದ ಬಿಡುಗಡೆಗೊಳಿಸುವಲ್ಲಿ ಕೂಡ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖರ ಪಾತ್ರ ಮಹತ್ವದ್ದಾಗಿದೆ. ಚೆಂಗಲ್ ಸತ್ಯಾಗ್ರಹದಲ್ಲಿ ಜೈಲುಪಾಲಾದ ಡಾ|| ಹೆಗಡೆವಾರ್ ಅಲ್ಲಿಯೇ ಬೌದ್ಧಿಕ ಸಭೆ ನಡೆಸಿ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚನ್ನು ಹೆಚ್ಚಿಸಿದರು. 1925ರ ವಿಜಯ ದಶಮಿಯಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಸ್ಥಾಪಿಸುವಾಗ ಡಾ|| ಹೆಗಡೆವಾರ್ ಅವರ ಉದ್ದೇಶ ಸ್ವರಾಜ್ಯವೇ ಆಗಿತ್ತು. ಸಂಘದ ಸ್ವಯಂ ಸೇವಕರಿಗೆ ನೀಡಲಾಗುತ್ತಿದ್ದ ಪ್ರತಿಜ್ಞೆಯಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರಕಿಸಲು ತನು-ಮನ, ಧನ ಪ್ರಾಮಾಣಿಕವಾಗಿ ಜೀವನ ಪರ್ಯಂತ ಪ್ರಯತ್ನಿಸುತ್ತೇನೆ ಎಂಬ ಸಂಕಲ್ಪ ಇರುತ್ತಿತ್ತು ಎಂಬುದರ ಕುರಿತು ಪ್ರಸ್ತಾಪಿಸಿರುತ್ತಾರೆ.

**ಉತ್ತರ:** ದಿನಾಂಕ: 11.08.2025 ರಂದು ಹೊಸದಿಗಂತ ದಿನ ಪತ್ರಿಕೆಯಲ್ಲಿ "ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧ ಸುಳ್ಳು ಸುದ್ದಿ ಹರಡುತ್ತಿರುವುದು ವಿಷಾದನೀಯ" ಎಂಬ ಶೀರ್ಷಿಕೆ ಅಡಿಯಲ್ಲಿ ಸುದ್ದಿ ಪ್ರಕಟವಾಗಿರುತ್ತದೆ. ಹೊಸ ದಿಗಂತ ದಿನ ಪತ್ರಿಕೆಯ ಕಛೇರಿ ಬೆಂಗಳೂರಿನ ಮಲ್ಲೇಶ್ವರಂ ನಲ್ಲಿ ಇದ್ದು, ಇದುವರೆಗೂ ಈ ಸಂಬಂಧ ಬೆಂಗಳೂರು ನಗರದಲ್ಲಿ ಯಾವುದೇ ದೂರು ದಾಖಲಾಗಿರುವುದಿಲ್ಲ.

---

ಹೆಚ್‌ಡಿ 406 ಎಸ್‌ಎಸ್‌ಟಿ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.